ಒಪ್ಪಂದ ಮಾಡಿ ಕೊಂಡಿರುವುದು, ಇನ್ನುಳಿದ ೮೨೭ ಮೆಟ್ರಿಕ್ ಟನ್‌ಗಳ ತಂಬಾಕನ್ನು ಮಾರಾಟ ಮಾಡಲು ವರ್ತಕರ ಜೊತೆಗೆ ಮಾತುಕತೆಗಳು ನಡೆದಿರುವುವು. ಈ ಮಾತುಗಳು ಮುಕ್ತಾಯವಾಗುವ ನಿರೀಕ್ಷೆ ಇದೆ.

೨-೦೫ ಪಿ.ಎಂ.

ವರದಿಯನ್ನೊಪ್ಪಿಸುವುದು

ಉಪಾಧ್ಯಕ್ಷರು.—ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ನಾಲ್ಕನೆಯ ವರದಿಯನ್ನು ಒಪ್ಪಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಸಭೆಯು ವರದಿಯನ್ನು ಒಪ್ಪುವುದೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಬಿ. ಕೋಳಿವಾಡ್.—(೧) ರಾಣೆಬೆನ್ನೂರು ತಾಲೂಕಿನ ಮುದೇನೂರು ಗ್ರಾಮದಲ್ಲಿರುವ ಚಾವಡಿ ಹಾಗೂ ಕೊಂಡವಾಡಗಳನ್ನು ದುರಸ್ತಿ ಮಾಡುವ ಬಗ್ಗೆ.

(ಅ) ರಾಣೆಬೆನ್ನೂರು ತಾಲೂಕಿನ ಮುದೇನೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪಶುವೈದ್ಯ ಶಾಲೆಯನ್ನು ತೆರೆಯುವ ಬಗ್ಗೆ.

(ಇ) ರಾಣೆಬೆನ್ನೂರು ತಾಲೂಕಿನ ಮುದೇನೂರು ಗ್ರಾಮದಲ್ಲಿ ಬಸ್ ನಿಲ್ದಾಣ ಕಟ್ಟಿಸುವ ಬಗ್ಗೆ.

(ಈ) ರಾಣೆಬೆನ್ನೂರು ತಾಲೂಕಿನ ಮುದೇನೂರು—ಮಳಗೊಂಡಿ ರಸ್ತೆಯ ದುರಸ್ತಿ ಬಗ್ಗೆ.

(ಉ) ರಾಣೆಬೆನ್ನೂರು ತಾಲೂಕಿನ ಮುದೇನೂರು ಗ್ರಾಮದ ರಸ್ತೆಯನ್ನು ಡಾಂಬರೀಕರಣ ಮಾಡುವ ಬಗ್ಗೆ.

(ಊ) ರಾಣೆಬೆನ್ನೂರು ತಾಲೂಕಿನ ಮುದೇನೂರು ಗ್ರಾಮದಲ್ಲಿ ಸರ್ಕಾರಿ ನೌಕರರಿಗೆ ವಸತಿ ಗೃಹಗಳನ್ನು ಕಟ್ಟಿಸುವ ಬಗ್ಗೆ.

(ಋ) ಹರಿಹರ ತಾಲೂಕಿನ ನಂದಿಗುಡಿ ಹತ್ತಿರ ತುಂಗಭದ್ರಾ ನದಿಗೆ ಸೇತುವೆ ನಿರ್ಮಾಣದ ಬಗ್ಗೆ.

ಮಾನ್ಯ ಅಧ್ಯಕ್ಷರೇ ಮೇಲ್ಕಂಡ ಅರ್ಜಿಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಗಳನ್ನು ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆ

ರಾಜ್ಯದಿಂದ ತಮಿಳುನಾಡಿಗೆ ಕಾವೇರಿ ಮತ್ತು ಕಬಿನಿ ನದಿಗಳ ನೀರನ್ನು ಒದಗಿಸುತ್ತಿರುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ.

ಶ್ರೀ ಹೆಚ್. ಡಿ. ಚೌಡಯ್ಯ.—ಅಧ್ಯಕ್ಷರೇ ನಾನು ರಾಜ್ಯದಿಂದ ತಮಿಳುನಾಡಿಗೆ ಕಾವೇರಿ ಮತ್ತು ಕಬಿನಿ ನದಿಗಳ ನೀರನ್ನು ಒದಗಿಸುತ್ತಿರುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಕೆಳಕಂಡಂತೆ ಹೇಳಿಕೆಯನ್ನು ಮಾಡಲು ಬಯಸುತ್ತೇನೆ.

ತಮಿಳುನಾಡಿನ ಕಾವೇರಿ ಡೆಲ್ಟಾ ಪ್ರದೇಶದಲ್ಲಿ ಬೆಳೆದು ನಿಂತು ಒಣಗುತ್ತಿರುವ ಬೆಳೆಗಳಿಗೆ ಮೆಟ್ಟೂರು ಜಲಾಶಯದಲ್ಲಿರುವ ನೀರು ಮತ್ತು ಕಾವೇರಿ ನದಿಯಲ್ಲಿ ಮೆಟ್ಟೂರಿಗೆ ಬರುವ ನೀರು ಫೆಬ್ರುವರಿ ಮೂರನೇ ವಾರದವರೆಗೆ ಸಾಕಾಗುವುದಿಲ್ಲವೆಂದು ತಿಳಿಸಿ, ನಮ್ಮ ರಾಜ್ಯದ ಕಾವೇರಿ ಜಲಾಶಯಗಳಲ್ಲಿರುವ ನೀರಿನ ಪೈಕಿ ೩೦ ಟಿ.ಎಂ.ಸಿ. ನೀರನ್ನು ತಮ್ಮ ರಾಜ್ಯಕ್ಕೆ ಬಿಟ್ಟುಕೊಡಬೇಕೆಂದು ನವೆಂಬರ್ ೮ರಲ್ಲಿ ತಮಿಳುನಾಡು ಮುಖ್ಯ ಮಂತ್ರಿಯವರು ಕೋರಿದ್ದರು. ಈ ದಿಸೆಯಲ್ಲಿ ಕೇಂದ್ರದಿಂದಲೂ ಸಹ ಕೋರಿಕೆ ಬಂದಿತ್ತು. ನಮ್ಮ ಜಲಾಶಯಗಳಲ್ಲಿ ಸಂಗ್ರಹವಾಗಿದ್ದ ನೀರು ಜನವರಿಯಿಂದ ಮೇ ತನಕ ಬರುವ ನೀರು ಮಂತ್ತು ನಮ್ಮ ರಾಜ್ಯದ ಬೆಳೆದು ನಿಂತ ಬೆಳೆಗಳ ಮತ್ತು ಕೆಲವು ನಗರ ಮತ್ತು ಪಟ್ಟಣಗಳ ಕುಡಿಯುವ ನೀರಿಗೆ ಹಾಗೂ ಶಿಂಷಾ ಮತ್ತು ಶಿವಸಮುದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ಬಿಡಬೇಕಾದ ನೀರನ್ನು ತುಲನೆ ಮಾಡಿದಾಗ, ನಮ್ಮ ಜಲಾಶಯಗಳಲ್ಲಿ ನಮ್ಮ ಬೇಡಿಕೆಗಳಿಗೆ ತುಂಬಲು ಮಾತ್ರ ನೀರು ಇರುವುದು ಕಂಡು ಬಂದಿತು. ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವ ಇದ್ದುದರಿಂದ, ನಾವು ಶಿಂಷಾ ವಿದ್ಯುದಾಗಾರದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಮಾಸಲಿರಿಸುವ ನೀರನ್ನು ತಮಿಳುನಾಡಿಗೆ ಬಿಟ್ಟರೆ ಈ ನೀರಿನ ಪ್ರಮಾಣಕ್ಕನುಗುಣವಾದ ವಿದ್ಯುಚ್ಛಕ್ತಿಯನ್ನು ನಮ್ಮ ರಾಜ್ಯಕ್ಕೆ ತಮಿಳುನಾಡು ಪೂರೈಸುವ ಕರಾರಿನ ಮೇಲೆ ಮತ್ತು ನೆರೆ ರಾಜ್ಯಗಳು ಪರಸ್ಪರ ಹೊಂದಾಣಿಕೆ ಮತ್ತು ಸಹಬಾಳ್ವೆ ಮಾಡಬೇಕೆಂಬ ಮತ್ತು ಕಷ್ಟ ಬಂದಾಗ ಒಬ್ಬರಿಗೊಬ್ಬರು ಸಹಾಯ ಮಾಡುವ ಮಾನವೀಯ ದೃಷ್ಟಿಯಿಂದ ಜನವರಿ ೧ ರಿಂದ ೩೧ ತಾರೀಖಿನವರೆಗೆ ಕಬಿನಿ ಜಲಾಶಯದಿಂದ ೩ ಟಿ.ಎಂ.ಸಿ. ಮತ್ತು ಕೃಷ್ಣರಾಜಸಾಗರ ಜಲಾಶಯದಿಂದ ೨ ಟಿ.ಎಂ.ಸಿ. ನೀರನ್ನು (ಒಟ್ಟು ೫ ಟಿ.ಎಂ.ಸಿ.) ನೀರನ್ನು ಬಿಟ್ಟು ಕೊಡಲಾಯಿತು.

ಪುನಃ ಜನವರಿ ೮೭ ರಲ್ಲಿ ತಮಿಳುನಾಡು ಮುಖ್ಯ ಮಂತ್ರಿಯವರು ಅವರು ಕೇಳಿದ್ದ ೩೦ ಟಿ.ಎಂ.ಸಿ. ನೀರಿನಲ್ಲಿ ೫ ಟಿ.ಎಂ.ಸಿ. ಮಾತ್ರಾ ಬಿಡುಗಡೆ ಮಾಡಿದ್ದರಿಂದ, ಉಳಿಕೆ ನೀರನ್ನು ಬಿಡುಗಡೆ ಮಾಡಲು ಕೋರಿದರು. ನಮ್ಮ ರಾಜ್ಯದ ಬೆಳೆಗಳಿಗೆ ಧಕ್ಕೆ ಆಗದಂತೆ ಹಿಂದಿನ ಕರಾರಿನಂತೆಯೇ ಫೆಬ್ರುವರಿ ೧ ರಿಂದ ೬ ರವರೆಗೆ ಪುನಃ ೫ ಟಿ.ಎಂ.ಸಿ. ನೀರನ್ನು (೧.೫ ಟಿ.ಎಂ.ಸಿ. ಕಬಿನಿಯಿಂದ ಮತ್ತು ೩.೫ ಟಿ.ಎಂ.ಸಿ. ಕೃಷ್ಣರಾಜಸಾಗರ ಜಲಾಶಯದಿಂದ) ತಮಿಳುನಾಡಿಗೆ ಬಿಟ್ಟು ಕೊಡಲಾಯಿತು. ಈ ಬಗೆ ಈ ಸಭೆಯಲ್ಲಿ ಆಗಲೇ ೩೦-೧-೧೯೮೭ ರಂದು ಹೇಳಿಕೆ ನೀಡಿ ಪಾನ್ಯ ಸದಸ್ಯರ ಗಮನಕ್ಕೆ ತಂದಿದ್ದೇನೆ. ನಮ್ಮ ರಾಜ್ಯದಲ್ಲಿ ಬೆಳೆದು ನಿಂತಿರುವ ಬೆಳೆಗಳ ಮತ್ತು ಕೆಲವು ನಗರ ಮತ್ತು ಪಟ್ಟಣಗಳ ಕುಡಿಯುವ ನೀರಿನ ಹಾಗೂ ಶಿವಸಮುದ್ರ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ಬೇಕಾಗುವ ನೀರಿನ ಪ್ರಮಾಣವನ್ನು ಮೊದಲು ಗಮನದಲ್ಲಿಟ್ಟುಕೊಂಡು ತಮಿಳುನಾಡಿಗೆ ನೀರನ್ನು ಬಿಡಲಾಗಿದೆ. ಕೃಷ್ಣರಾಜಸಾಗರದಿಂದ ಬಿಟ್ಟ ೩.೫ ಟಿ.ಎಂ.ಸಿ. ನೀರನ್ನು ಹೇಮಾವತಿ ಜಲಾಶಯದಲ್ಲಿದ್ದ ನೀರಿನಿಂದ ತುಂಬಲಾಗಿದೆ. ನಮ್ಮ ರಾಜ್ಯದ ಹಿತಕ್ಕೆ ಈ ಕ್ರಮದಿಂದ ಯಾವ ಬಗೆಯ ಘಾತಕವೂ ಆಗಲಾರದೆಂದು ಮಾನ್ಯ ಸದಸ್ಯರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ.—ಸ್ವಾಮಿ, ಮೊನ್ನೆ ತಾನೇ ತಮಿಳುನಾಡಿನ ಲೋಕೋಪಯೋಗಿ ಮಂತ್ರಿಗಳು ಬೆಂಗಳೂರಿಗೆ ಬಂದು ನಮ್ಮ ಮುಖ್ಯಮಂತ್ರಿ ಮತ್ತು ಲೋಕೋಪಯೋಗಿ ಸಚಿವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಇದರ ಅರ್ಥ ಏನೆಂದರೆ ಅವರಿಗೆ ೧೦-೧೫ ಟಿ.ಎಂ.ಸಿ. ನೀರು ಬೇಕೆಂಬುದು. ನಮ್ಮ ಅನುಭವದ ಪ್ರಕಾರ ಇನ್ನೂ ಮಾರ್ಚ್, ಏಪ್ರಿಲ್ ಮೇ ಮತ್ತು ಜೂನ್ ೪ ತಿಂಗಳಲ್ಲಿ ಬೇಸಿಗೆಯಿರುತ್ತದೆ. ಕೆರೆ ಕಟ್ಟೆಗಳು ಒಣಗಿಹೋಗಿರುತ್ತವೆ. ಈ ಸಮಯದಲ್ಲಿ ಹಾಲಿ ಕಬ್ಬು ರಾಗಿ ಭತ್ತ ಇವು ಕೈಗೆ ಸಿಕ್ಕಬೇಕಾದರೆ ಈಗಿರುವ ಕೆ.ಆರ್.ಎಸ್. ನೀರೇ ನಮಗೆ ಸಾಲದಾಗುತ್ತದೆ. ಆದ್ದರಿಂದ ದಯವಿಟ್ಟು ತಮ್ಮಲ್ಲಿ ಕೇಳಿಕೊಳ್ಳಬೇಕಾದ್ದೇನೆಂದರೆ, ಯಾವ ಕಾರಣದಿಂದಲೂ ನೀರನ್ನು ತಮಿಳುನಾಡಿಗೆ ಬಿಡಬೇಡಿ. ಒಂದು ಪಕ್ಷ ಬಿಟ್ಟರೆ ಆದರಿಂದ ಆಗತಕ್ಕ ಕೋಟ್ಯಂತರ ರೂ.ಗಳ ನಷ್ಟಕ್ಕೆ ಪರಿಹಾರ ಕೊಡಲು ಸರ್ಕಾರ ಬದ್ಧವಾಗಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ.

† **ಶ್ರೀ ಡಿ. ಟಿ. ಜಯಕುಮಾರ್** (ನಂಜನಗೂಡು) —ನಮ್ಮ ಕಡೆಯೂ ಇದರಿಂದ ತುಂಬಾ ಕಷ್ಟವಾಗುತ್ತದೆ. ನಮ್ಮ ರೈತರಿಗೆ ವಿರೋಧವಾಗಿ ಅವರ ಸುಖಕ್ಕೆ ಪೂರಕವಾಗಿ ತಮಿಳುನಾಡಿನ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರಿಂದ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬೇಡಿಕೆಗೆ ಮಣಿದಂ ಸರ್ಕಾರ ನೀರನ್ನು ಬಿಡಬಾರದೆಂದು ನಾನಂ ಸಹ ಮಾನ್ಯ ಮಂತ್ರಿಗಳಲ್ಲಿ ಕೋರುತ್ತೇನೆ.

ಈಗ ಬೇಸಿಗೆ ಕಾಲ ಬರುತ್ತಿದೆ. ಅಲ್ಲಿ ಸಾಕಷ್ಟು ನೀರು ಇಲ್ಲ, ಅಲ್ಪ ಸ್ವಲ್ಪ ಬಂದಿದ್ದ ಕಡಲೇ ಕಾಯಿ, ರಾಗಿ ಬೆಳೆ ಎಲ್ಲಾ ಒಣಗುತ್ತಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಅವರ ಜಿಧಾರ್ಮಕ್ಕೆ ಮಣಿಯದೆ ಬೇಡಿಕೆಗೆ ಮಣಿಯದೆ ಕಬಿನಿ ಬಲ ದಂಡೆ ನಾಲೆಗೆ ನೀರನ್ನು ಕೊಡಬೇಕು. ಈಗ ತಾವೇನಾದರೂ ಅವರಿಗೆ ನೀರನ್ನು ಕೊಟ್ಟರೆ ಬೆಳೆದು ನಿಂತಿರತಕ್ಕಂತಹ ನಮ್ಮ ಪೈರಿಗೆ ತೊಂದರೆ ಯಾಗುತ್ತದೆ, ಮೊದಲಂ ನಮ್ಮ ಪೂರೈಕೆಯ ಕಡೆಗೆ ಗಮಂನ ಕೊಡಬೇಕು. ಮಾನ್ಯ ದೇವೇಗೌಡರು ರೈತ ಕುಟುಂಬದಿಂದ ಬಂದಿರತಕ್ಕಂತಹವರಂ, ಅವರಿಗೂ ಕೂಡ ಇದರ ಬಗ್ಗೆ ಕಾಳಜಿಯಿದೆ ಎಂದು ನಾನಂ ತಿಳಿದುಕೊಂಡಿದ್ದೇನೆ. ಕಬಿನಿ ನಾಲೆಯು ಪ್ರವಾಹ ರೂಪದಲ್ಲಿ ತುಂಬಿಕೊಂಡು ಹೋಗಂತ್ತಿದೆ. ದನಕರುಗಳಿಗೆ ನೀರು ಇಲ್ಲ, ಮೊದಲು ಅವರ ಕಷ್ಟವನ್ನು ಪರಿಹಾರ ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲೂ ಸಹ ನೀರಿಲ್ಲ.

ಶ್ರೀ ಹೆಚ್. ಜಿ. ಚೆನ್ನಪ್ಪ —ಮಾನ್ಯ ಅಧ್ಯಕ್ಷರೇ, ಅವರಿಗೂ ಅವಕಾಶ ಕೊಡಿ.

ಶ್ರೀ ಡಿ ಟಿ. ಜಯಂಕುಮಾರ್.— ಮಾನ್ಯ ಅಧ್ಯಕ್ಷರೇ, ಜನತೆಯ ಹಿತದೃಷ್ಟಿಯಿಂದ ಪರಿಸ್ಥಿತಿಯ ಗಂಭೀರತೆಯಿಂದ ಕೇಳುತ್ತಿದ್ದಾರೆ ಅವರಿಗೆ ಅವಕಾಶ ಕೊಡಿ. ನಿಯಮವನ್ನು ಸಡಿಲಿಸುವುದಕ್ಕೆ ತಮಗೆ ಅವಕಾಶ ಇದೆ.

ಅಧ್ಯಕ್ಷರಂ.— ಕಾಲಿಂಗ್ ಅಟೆನ್‌ಷನ್ ಅನ್ನು ಯಾರಂ ಕಳುಸಿರುತ್ತಾರೆ ಅವರಿಗೆ ಮಾತ್ರ ಅವಕಾಶ ಇದೆ. ಶ್ರೀ ಮಾದೇಗೌಡರಂ, ಶ್ರೀ ಜಯಂಕುಮಾರ್‌ರವರಂ ಮತ್ತು ಶ್ರೀ ಚೌಡಯ್ಯನವರಂ ಮಾತ್ರ ನೋಟೀಸ್ ಕಳಿಸಿಕೊಟ್ಟಿದ್ದಾರೆ, ತಮ್ಮ ಹೆಸರು ಇಲ್ಲಿ ಇಲ್ಲ, ತಾವು ದಯವಿಟ್ಟು ಕುಳಿತಂಕೊಳ್ಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಪೊನ್ನೆ ಪುನಃ ತಮಿಳುನಾಡಿನ ಲೋಕೋಪಯೋಗಿ ಪಂಂತ್ರಿಗಳಂ ಅಲ್ಲಿನ ಮುಖ್ಯಮಂತ್ರಿಗಳ ಪರವಾಗಿ ಇಲ್ಲಿಗೆ ಬಂದಂ ಈಗ ಬೆಳೆದಂ ನಿಂತಿರತಕ್ಕಂತಹ ಬೆಳೆ ಒಣಗಂತ್ತಿದೆ, ನೀರಂ ಕೊಡಿ ಎಂದು ಪ್ರನವಿ ಸಲ್ಲಿಸಿರತಕ್ಕಂಥಾದ್ದು ಪತ್ರಿಕೆಯಲ್ಲಿ ಬಂದಿದೆ, ನನ್ನನ್ನು ಕೂಡ ಭೇಟಿ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದ್ದಾರೆ, ನಾವೂ ಕೂಡ ಸಮ್ಮ ಕಷ್ಟವನ್ನು ತಿಳಿಸಿದ್ದೇವೆ. ೭೧–೮೦ ಸಾವಿರ ಎಕರೆಗೆ ಬರಗಾಲ ಬಂದಿದೆ, ಮಳೆ ಸರಿಯಾಗಿಲ್ಲ ಎಂಬ ಪ್ರಶ್ನೆಯನ್ನು ಆ ಸರಕಾರದ ಮಂದೆ ಇಟ್ಟಿದ್ದೇವೆ. ಅದೇ ರೀತಿ ಕೇಂದ್ರ ಸರಕಾರದ ಮುಂದೆ ಕೂಡ ಇಟ್ಟಿದ್ದೇವೆ. ಅಲ್ಲಿಂದ ಸೂಚನೆ ಬಂದಿದೆ. ಮಾನ್ಯ ಜಯಂಕುಮಾರ್‌ರವರು, ಶ್ರೀ ಚೌಡಯ್ಯ ಪವರು ಪಂತ್ತು ಶ್ರೀ ಮಾದೇಗೌಡರು ನಮ್ಮ ಭಾಗದಲ್ಲಿ ಹಾಲಿ ನಿಂತಿರತಕ್ಕಂತಹ ಬೆಳೆಗೆ ಅಪಾಯ ಪಾಗುತ್ತದೆ, ರೈತರಿಗೆ ತೊಂದರೆಯಾಗುತ್ತದೆಂದು. ತಮ್ಮ ಕಳವಳವನ್ನು ಕೂಡ ವ್ಯಕ್ತಪಡಿಸಿದ್ದಾರೆ. ಬೆಳೆಗಳನ್ನು ನಮ್ಮ ಕೈಗೆ ತೆಗೆದುಕೊಳ್ಳಬೇಕಾದರೆ ಕನಿಷ್ಠ ಪ್ರಮಾಣದ ನೀರನ್ನಾದರೂ ಉಳಿಸಿ ಕೊಳ್ಳಲೇಬೇಕೆಂಬ ಮಾನ್ಯ ಸದಸ್ಯರ ಕಳಕಳಿ ಏನಿದೆ ಅದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಕಳೆದ ಸಾರಿ ನೀರನ್ನು ಕೊಟ್ಟಿದ್ದೂ ಕೂಡ ನಮ್ಮ ಬೆಳೆಗಳಿಗೆ ಇಟ್ಟುಕೊಂಡಂಥಾದ್ದಲ್ಲ. ೧೦ ಟಿ.ಎಂ.ಸಿ ನೀರನ್ನು ಏನಂ ಕೊಟ್ಟಿದ್ದೆವು, ಅದೂ ನಾವು ಪವರ್ ಜನರೇಷನ್‌ಗೋಸ್ಕರ ಇಟ್ಟುಕೊಂಡಿದ್ದೆವು. ಅದನ್ನು ಮಾತ್ರ ಕೊಟ್ಟಿದ್ದೇವೆ.

ಅವರು ಈಗ ಜಲಾಶಯ ಕಟ್ಟಿಕೊಂಡಿದ್ದಾರೆ, ಆ ನೀರನ್ನು ಹಿಡಿದಂ ಅವರಿಗೆ ತೊಂದರೆ ಕೊಡಬೇಕು ಎನ್ನುವ ಅಭಿಪ್ರಾಯ ಪ್ರಾಮಾಣಿಕವಾಗಿ ಈ ಸರ್ಕಾರಕ್ಕೆ ಇಲ್ಲ. ನಮ್ಮ ಕಳಕಳಿ ಏನೆಂದರೆ, ಅವರ ಪಂತ್ತು ನಮ್ಮ ಸೌಹಾರ್ದಯಂತವಾದಂಥ ವಾತಾವರಣವನ್ನು ಮುಂದುವರಿಸಿಕೊಂಡು ಹೋಗಬೇಕು, ಕಷ್ಟಸುಖವನ್ನು ಹಂಚಿಕೊಳ್ಳಬೇಕೆಂಬ ಬಯಕೆ ನಮ್ಮಲ್ಲಿ ಇದೆ. ಪವರ್ ಅಭಾವ ಇಷ್ಟೊಂದು ತೀವ್ರವಾಗಿ ಕರ್ನಾಟಕದಲ್ಲಿದ್ದರೂ, ಸಹ ನೀರನ್ನು ಬಿಟ್ಟುಕೊಟ್ಟು ಸ್ವಲ್ಪಮಟ್ಟಿಗೆ ಅನುಕೂಲ ಮಾಡಿಕೊಡಿ, ಸಹಕಾರ ಕೊಡಿ ಎಂದು ಕೇಳಿದ್ದಾರೆ. ಇವತ್ತು ಕನಿಷ್ಠ ೫ ಟಿ.ಎಂ.ಸಿ. ನೀರನ್ನು ಕೊಡಬೇಕಂ ಬೆಳೆಯನ್ನು ಉಳಿಸಿಕೊಳ್ಳುತ್ತೇವೆ ಎಂದು ಒತ್ತಾಯ ಹಾಕಿದ್ದಾರೆ. ಇದರ ಬಗ್ಗೆ ಈ ಸದನದಲ್ಲಿ ಹಲವಾರು ಸಾರಿ ನಾವುಗಳು ಚರ್ಚೆ ಮಾಡಿದ್ದೇವೆ. ಅಲ್ಲಿ ಎರಡೆಂ–ಮೂರಂ ಬೆಳೆಯನ್ನು ಇಡತಕ್ಕಂಥ ಪದ್ಧತಿ ಇವತ್ತಿಗೂ ಕೂಡಾ ಇದೆ. ಪಾಂಡಿಚೆರಿ ಮತ್ತು ತಮಿಳುನಾಡು ಈ ಎರಡಂ ರಾಜ್ಯಗಳಲ್ಲಿ ಮಳೆ ಅಭಾವದಿಂದ ಅಲ್ಲಿ ಪರಿಸ್ಥಿತಿ ನಮಗಿಂತ ಬಹಳ ದುಸ್ತರವಾಗಿದೆ ಎಂದು

ನಮ್ಮ ಗಮನಕ್ಕೆ ಬಂದಿದೆ. ನಮ್ಮ ಅಧಿಕಾರಿಗಳನ್ನು ಕೂಡಾ ಅಲ್ಲಿಗೆ ಕಳುಹಿಸಿ ವಿಷಯವನ್ನು ತರಿಸಿಕೊಂಡಿದ್ದೇನೆ. ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಇವತ್ತು ಅವರ ಪರಿಸ್ಥಿತಿ ಎಷ್ಟು ಭೀಕರವಾಗಿದೆಯೋ, ನಮ್ಮ ಪರಿಸ್ಥಿತಿಯೂ ಕೂಡಾ ಅಷ್ಟೇ ಭೀಕರವಾಗಿದೆ. ಇಬ್ಬರೂ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿ ತೊಳಲಾಡುತ್ತಿದ್ದೇವೆ. ಅವರು ಒಂದು ತಪ್ಪು ಕಲ್ಪನೆಯನ್ನು ಇಟ್ಟುಕೊಂಡಿದ್ದಾರೆ, ಅದು ಸರಿಯಲ್ಲ. ಏನೆಂದರೆ ನಾವು ಹೋದಸಾರಿ ೨೦ ಟಿ.ಎಂ.ಸಿ. ನೀರನ್ನು ಕೊಟ್ಟಿದ್ದೆವು ಎಂದು. ಏನೋ ಕೊನೆಯಲ್ಲಿ ಮಳೆ ಬಂತು, ನೀರಿನ ಸಂಗ್ರಹ ಆಯಿತು. ಇವತ್ತು ಮೈಸೂರು ನಗರಕ್ಕೆ ಕುಡಿಯುವ ನೀರನ್ನು ಕೊಡಬೇಕು, ಬೆಂಗಳೂರಿಗೆ ಜನಕ್ಕೆ ಕುಡಿಯುವ ನೀರನ್ನು ಕೊಡಬೇಕು, ಅದಕ್ಕಾಗಿ ನೀರನ್ನು ಇಟ್ಟುಕೊಳ್ಳಬೇಕಾಗುತ್ತದೆ ಮತ್ತು ಬೇರೆ ಬೇರೆ ನಗರಪ್ರದೇಶಗಳಿಗೆ ಕುಡಿಯಲು ನೀರನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇಷ್ಟೆಲ್ಲಾ ಆದಮೇಲೆ ಇನ್ನೂ ಏನಾದರೂ ಸ್ವಲ್ಪಮಟ್ಟಿಗೆ ಅವರ ಕಷ್ಟಕ್ಕೆ ಕರಿಯಾಯಿತಿ ತೋರಿಸೋಣ ಎಂದು ಹೇಳಿದರೆ, ನಾಲ್ಕು ತಿಂಗಳ ಒಳಗೆ ಮಳೆ ಏನಾದರೂ ಕೈಕೊಟ್ಟರೆ ಆಗ ನಮ್ಮ ಜನರಿಗೆ ಕಷ್ಟವಾಗುತ್ತದೆ. ಆದ್ದರಿಂದ ನಾನು ವರುಣನಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜಾಗ್ರತೆ ಮಳೆಯಾದರೆ ಅನುಕೂಲವಾಗುತ್ತದೆ. ಸರ್ಕಾರ ಇದರ ಬಗ್ಗೆ ಎಲ್ಲರ ಹತ್ತಿರ ಚರ್ಚೆ ಮಾಡುತ್ತದೆ, ಚರ್ಚೆಮಾಡಿ ಒಂದು ನಿರ್ಣಯಕ್ಕೆ ಬರುತ್ತದೆ.

ಶ್ರೀ ಡಿ. ಟಿ. ಜಯಕುಮಾರ್.—ನೀವು ಪ್ರತಿ ವರ್ಷವೂ ಇದೇ ರೀತಿಯಾಗಿ ರೂಢಿ ಮಾಡಿಕೊಂಡು ಬಂದಿದ್ದೀರಿ. ಈ ರೀತಿಯ ಔದಾರ್ಯದಿಂದ ನೀರನ್ನು ಕೊಡುತ್ತಾ ಬಂದರೆ, ನಮ್ಮ ರೈತರ ಕಷ್ಟವನ್ನು ಯಾರು ನೋಡಬೇಕು. ಬೆಳೆ ತೆಗೆಯುವುದಕ್ಕೆ ಬೇಡ, ದನಕರುಗಳಿಗೆ ಕುಡಿಯುವುದಕ್ಕೂ ನೀರು ಬೇಡವೇ ? ನಮ್ಮ ಕಾಲುವೆಗಳಲ್ಲಂತಲೂ ನೀರು ಇಲ್ಲವೇ ಇಲ್ಲ. ದನಕರುಗಳಿಗೆ ಕೂಡಾ ಇವತ್ತು ಕುಡಿಯಲಿಕ್ಕೆ ನೀರು ಇಲ್ಲವಾಗಿದೆ. ಆದ್ದರಿಂದ ಮಾನ್ಯ ಲೋಕೋಪಯೋಗಿ ಸಚಿವರು ಇವತ್ತೇ ಮಂಡ್ಯಿ ಇಂಜಿನಿಯರ್ ರಾಮಚಂದ್ರು ಎಂಬುವರಿಗೆ ಫೋನ್ ಮಾಡಿ, ದನಕರುಗಳಿಗೆ ಕುಡಿಯುವ ನೀರನ್ನು ಒದಗಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಜಯಕುಮಾರ್ ಹೇಳುವುದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಕುಡಿಯುವ ನೀರಿಗೆ ತೊಂದರೆ ಇದೆ, ಇಲ್ಲ ಎಂದು ನಾನು ಹೇಳುವುದಿಲ್ಲ. ನಮ್ಮ ರೈತರಿಗೆ ತೊಂದರೆ ಕೊಟ್ಟು ಅವರಿಗೆ ನೀರನ್ನು ಕೊಡಬೇಕು ಎನ್ನುವ ಉದ್ದೇಶ ನಮಗಿಲ್ಲ. ಆದರೆ ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ಬೆಳೆ ಬೆಳೆದು ಒಣಗಿ ನಿಂತಿದೆ. ಇದರ ಬಗ್ಗೆ ನಮ್ಮ ಅಧಿಕಾರಿಗಳಿಂದ ರಿಪೋರ್ಟನ್ನು ತರಿಸಿಕೊಂಡಿದ್ದೇನೆ. ಮಾನವೀಯ ಪ್ರಶ್ನೆ ಇಲ್ಲಿದೆ. ಅವರು ಹೇಳತಕ್ಕಂಥದ್ದು ಅಕ್ಷರಶಃ ನಿಜ. ಅವರು ಕಷ್ಟದಲ್ಲಿದ್ದಾರೆಂಬ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ ಹೊರತಾಗಿ, ನಮ್ಮ ಜನಕ್ಕೆ ತೊಂದರೆ ಕೊಟ್ಟು ಅವರಿಗೆ ಸಹಾಯ ಮಾಡಬೇಕು ಎನ್ನುವ ಭಾವನೆ ಇಲ್ಲವೇ ಇಲ್ಲ. ಸೌಹಾರ್ದಯುತವಾದ ವಾತಾವರಣದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲದೇ, ಏವಾದ ಇಲ್ಲದೆ ಇದನ್ನು ಬಗೆಹರಿಸಿಕೊಳ್ಳುವುದಕ್ಕೆ ಅವರು ಬಂದಿದ್ದಾರೆ. ಇದನ್ನು ನಮ್ಮ ಔದಾರ್ಯ ಎಂದು ತಿಳಿದುಕೊಳ್ಳಬೇಕಾದ್ದಿಲ್ಲ. ಒಂದು ಕಳಕಳಿಯ ಭಾವನೆ ಇದೆ. ಇವತ್ತು ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳೋಣ. ಚೆನ್ನಾಗಿ ಮಳೆ ಬಂದು ಅವರ ಕಷ್ಟ, ನಮ್ಮ ಕಷ್ಟ ಎರಡೂ ಬಗೆಹರಿಯಲಿ ಎಂದು ಪ್ರಾರ್ಥಿಸಿಕೊಳ್ಳೋಣ. ಈ ಸಂದರ್ಭದಲ್ಲಿ ಅಲ್ಲಿ ಬೆಳೆದು ನಿಂತಿರತಕ್ಕಂಥ ಬೆಳೆ ಉಳಿದುಕೊಳ್ಳಲಿಕ್ಕೆ ಎಷ್ಟರಮಟ್ಟಿಗೆ ಸಾಧ್ಯ ಇದೆಯೋ ನೋಡೋಣ. ಈ ಬಗ್ಗೆ ಒಂದೆರಡು ದಿವಸದಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳಲು ನಿಮ್ಮಗಳನ್ನು ಕೇಳುತ್ತೇವೆ. ನಮ್ಮ ರಾಜ್ಯದ ರೈತರಿಗೆ ತೊಂದರೆ ಮಾಡತಕ್ಕಂಥ ಉದ್ದೇಶ ಇಲ್ಲ. ಅವರ ನಮ್ಮ ಸೌಹಾರ್ದವನ್ನು ಉಳಿಸಿಕೊಳ್ಳಬೇಕಾದಂಥ ವಿಶ್ವಾಸವನ್ನು ಉಳಿಸಿಕೊಳ್ಳಬೇಕಾದಂಥ ಸಂದಿಗ್ಧತೆ ಇದೆ, ಅದಕ್ಕೋಸ್ಕರವಾಗಿ ಶಕ್ತಿ ಮೀರಿ ಪ್ರಯತ್ನ ಮಾಡುತ್ತೇನೆ. ತಮ್ಮಲ್ಲಿ ನಾನು ಈ ಸಂದರ್ಭದಲ್ಲಿ ಇಷ್ಟೇ ಕೇಳಿಕೊಳ್ಳುವುದು ಅವರ ಬೆಳೆ ಉಳಿಸಬೇಕು, ಆ ರೈತರಿಗೆ ತೊಂದರೆಯಾಗಬಾರದು. ಅದಕ್ಕೆ ನಮಗೆ ವರುಣನ ಕೃಪೆ ಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.—ಇದರಲ್ಲಿ ಮಂಳೆ ಬರಬೇಕಾದ ಅವಶ್ಯಕತೆ ಇಲ್ಲ. ಏತಕ್ಕೆಂದರೆ ತಾವು ಜನವರಿ ತಿಂಗಳಲ್ಲಿ ೩ ಟಿಎಂಸಿ ಆಷ್ಟು ನೀರು ಕೊಟ್ಟಿದ್ದೀರಿ, ಫೆಬ್ರವರಿ ತಿಂಗಳಲ್ಲಿ ೧.೫ ಟಿಎಂಸಿ ಆಷ್ಟು ನೀರು ಕೊಟ್ಟಿದ್ದೀರಿ ; ಹೀಗೆ ಅವರಿಗೆ ತಾವು ೪.೫ ಟಿಎಂಸಿ ಆಷ್ಟು ನೀರು ಕೊಟ್ಟಿರುವಾಗ ನಮಗೆ ಅರ್ಧ ಟಿಎಂಸಿ ಆಷ್ಟಾದರೂ ನೀರು ಕೊಟ್ಟರೆ ಸಾಕು, ನಮ್ಮ ರೈತರು ಬದುಕಿಕೊಳ್ಳುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಬಗ್ಗೆ ಏನಿದ್ದರೂ ಇನ್ನು ೨-೩ ದಿವಸದಲ್ಲೇ ತೀರ್ಮಾನ ಮಾಡಬೇಕು. ಇಲ್ಲದೇ ಹೋದರೆ ಆವರ ಬೆಳೆಯೆಲ್ಲಾ ಹಾಳಾಗಿ ಹೋಗುತ್ತದೆ. ಮಾರ್ಚಿ ಕೊನೆಯೊಳಗೇನಾದರೂ ಕೂಡ ಭರಣಿ ಮಳೆ ಆದರೆ ಬೆಳೆ ಉಳಿದುಕೊಳ್ಳುತ್ತದೆ ಎನ್ನುವುದು ನಮ್ಮ ಆಶಯ. ಈ ಒಂದೂ ದ್ವಂದ್ವ ಹೋರಾಟದಲ್ಲಿ ನಾವು ಇದ್ದೇವೆ. ಈ ಬಗ್ಗೆ ನಾವು ಏನೂ ನಿರ್ಣಯ ಮಾಡಿಲ್ಲ. ಈ ವಿಷಯವನ್ನು ನಾನು ಹಿಂದೆಯೇ ಹೇಳಿದ್ದೇನೆ.

(2) ಧಾರವಾಡ ಜಿಲ್ಲೆಯಲ್ಲಿ ವ್ಯವಸಾಯಗಾರರು ಚಳುವಳಿಯನ್ನು ಪ್ರಾರಂಭಿಸಿ ಜೈಲಿಗೆ ಹೋಗುತ್ತಿರುವುದು.

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ರೈತರು ಜೇಲ್ ಭರೋ ಚಳುವಳಿ ಆರಂಭಿಸಿರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು) —ರೈತರೆ ತಮ್ಮ ಸಂಕಷ್ಟಗಳನ್ನು ಪರಿಹರಿಸಲು ಸರ್ಕಾರವನ್ನು ಕೇಳುತ್ತಲೇ ಬಂದಿದ್ದಾರೆ. ಈಗ ಭೂ ಕಂದಾಯ ಇತರೆ ಸಾಲಗಳನ್ನು ಸರ್ಕಾರವು ಬಲವಾತ್ಕಾರವಾಗಿ ವಸೂಲು ಮಾಡುತ್ತಿದೆ. ರೈತರ ನ್ಯಾಯಬದ್ಧವಾದ ಬೇಡಿಕೆಗಳನ್ನು ಈಡೇರಿಸುವುದು ಸರ್ಕಾರದ ಧರ್ಮ. ರೈತರಿಗೆ ತಮ್ಮ ಉತ್ಪಾದನೆಯ ಮೇಲೆ ಸರಿಯಾಗಿ ಧಾರಣೆ ಸಿಗದೆ ಕೊರಗುತ್ತಿದ್ದಾರೆ. ಆದಕ್ಕಾಗಿ ನಾನು ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಸರ್ಕಾರ ರೈತರ ನ್ಯಾಯಬದ್ಧವಾದ ಬೇಡಿಕೆಗಳನ್ನು ಯಾವಾಗಲೂ ಸಹಾನುಭೂತಿಯಿಂದ ಪರಿಶೀಲಿಸುತ್ತಾ ಬಂದಿದೆ. ರೈತರ ಹಲವಾರು ಬೇಡಿಕೆಗಳನ್ನು ಸಚಿವ ಸಂಪುಟದ ಉಪ ಸಮಿತಿಯು ಸರ್ಕಾರಕ್ಕೆ ಅನೇಕ ಶಿಫಾರಸ್ಸುಗಳನ್ನು ಮಾಡಿತ್ತು. ಅವುಗಳನ್ನು ಕ್ರೋಢೀಕರಿಸಿ ಸರ್ಕಾರ ರೈತರಿಗೆ ಕೆಳಕಂಡ ಮುಖ್ಯವಾದ ರಿಯಾಯಿತಿಗಳನ್ನು ಕೊಟ್ಟಿದೆ.

೧) ಸುಮಾರು ೫೦೦ ಕೋಟಿ ರೂಪಾಯಿಗಳ ಭೂ ಅಭಿವೃದ್ಧಿ ಶುಲ್ಕವನ್ನು ಮನ್ನಾ ಮಾಡಿದೆ,

೨) ೭೮ರಲ್ಲಿ ವಿಧಿಸಿದ ಹೆಚ್ಚಿನ ನೀರಾವರಿ ತೆರಿಗೆಯನ್ನು ಕಡಿಮೆ ಮಾಡಿದೆ.

೩) ೧೦ ಏಕರೆ ಮತ್ತು ಅದಕ್ಕಿಂತ ಕಡಿಮೆ ಇದ್ದ ಒಣ ಬೇಸಾಯಗಾರರಿಗೆ ಭೂ ಕಂದಾಯವನ್ನು ಮನ್ನಾ ಮಾಡಿದೆ.

೪) ೧೭-೧೦-೧೯೮೪ರಿಂದ ಮುಂದೆ ಕೊಡಬೇಕಾದ ೧೦ ವಿಮಾ ಕಂತುಗಳನ್ನು (ಪ್ರೀಮಿಯಂ ಇನ್ಸ್ಟಾಲ್‌ಮೆಂಟ್ಸ್)ಗಳನ್ನು ಮನ್ನಾ ಮಾಡಿದೆ.

೫) ತಕಾವಿ ಸಾಲ, ಬಂಡಿಂಗ್ ಸಾಲ, ಅಲ್ಪಾವಧಿ ಸಾಲಗಳನ್ನು ಮತ್ತು ಇನ್ನಿತರ ಸಾಲವನ್ನು ಮನ್ನಾ ಮಾಡಿದೆ. ಅಲ್ಲದೆ.

೬) ಸಹಕಾರ ಸಾಲದ ಮೇಲಿನ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದೆ. ಮತ್ತು ರೈತರು ಉಪಯೋಗಿಸುವ ರಾಸಾಯನಿಕ ಗೊಬ್ಬರ, ಟ್ರಾಕ್ಟರ್ ಮತ್ತು ವ್ಯವಸಾಯ ಉಪಕರಣಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದೆ. ಹೀಗಾಗಿ ಒಟ್ಟು ರೈತರಿಗೆ ಸುಮಾರು ೬೦೦ ಕೋಟಿ ರೂಪಾಯಿಗಳ ರಿಯಾಯಿತಿಗಳನ್ನು ಸರ್ಕಾರವು ನೀಡಿದೆ.

ರೈತಸಂಘದ ಕೆಲವರು ತಿಳಿದಂತೆ, ಭೂ ಅಭಿವೃದ್ಧಿ ತೆರಿಗೆಯನ್ನು ಪುನಃ ವಿಧಿಸುವ ವಿಚಾರ ಸರ್ಕಾರದ ವಿಚಾರದಲ್ಲಿ ಇಲ್ಲ. ೧೯೮೩-೮೪, ೧೯೮೪-೮೫, ೧೯೮೫-೮೬ರಲ್ಲಿ ಭೀಕರ ಬರಗಾಲ ಪರಿಸ್ಥಿತಿ ತೋರಿಸಿದ್ದುದ್ದಕ್ಕಾಗಿ ಎಷ್ಟೋ ಭೂ ಕಂದಾಯವನ್ನು ಮನ್ನಾ ಮಾಡಲಾಗಿದೆ. ಮತ್ತು ವಸೂಲಿ ವಜಾಮಾಡಲಾಗಿದೆ. ಸರ್ಕಾರದ ಕ್ರಮದಿಂದ ಸಹಕಾರ ಸಾಲಗಳ ವಸೂಲಾತಿ ಕೂಡ ವಜಾಮಾಡಲ್ಪಟ್ಟಿತು.

ಈ ಎಲ್ಲಾ ಸಾಲಗಳ ಮುಂದೂಡಿಕೆ ಮತ್ತು ಭೂ ಕಂದಾಯ ಮುಂದೂಡಿಕೆ ಕ್ರಮದಿಂದ ಸರ್ಕಾರಕ್ಕೆ ಬರಬೇಕಾದ ಹಣ ಈ ವರ್ಷದ ಜನವರಿವರೆಗೆ ಸುಮಾರು ೮೫ ಕೋಟಿ ರೂಪಾಯಿಗಳ ಬಾಕಿ